O.S. ನಂಬರಃ 48/2022

ಪಿ. ಡಬ್ಲ್ಯೂಃ 2

ದಿಃ 27-09-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ</u>

ನನ್ನ ತಂದೆಗೆ 70 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ. ನನ್ನ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಈ ದಿನ ನನ್ನ ತಂದೆ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ನನ್ನ ಹೆಂಡತಿ ಬಂದಿದ್ದಾಳೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ಆಶಾ ಕಾರ್ಯಕರ್ತೆ ಇರುತ್ತಾರೆ. ದಾವಾ ಆಸ್ತಿಯ ಸಂಖ್ಯೆ 325/2 ಕ್ಷೇತ್ರ 1-ಗುಂಟೆ 8-ಆಣೆ ಇದೆ. ಸದರಿ ಆಸ್ತಿಯ ಪೂರ್ವಕ್ಕೆ ಪೊಕ್ಕಾ ಗಿರಿಯಾ ಗೌಡನ ಆಸ್ತಿ ಇದ್ದು, ಅದರ ನಂಬರ ಗೊತ್ತಿಲ್ಲ. ಪಶ್ಚಿಮಕ್ಕೆ ಗಣೇಶ ಹಾಗೂ ಪುಂಡಲೀಕ ಸಹೋದರರ ಪ್ರತ್ಯೇಕ ಮನೆಗಳಿವೆ, ಅವುಗಳ ಸರ್ವೇ ನಂಬರ ಹೇಳಲು ಬರುವುದಿಲ್ಲ. ಉತ್ತರಕ್ಕೆ ಬೇರೆಯವರ ಮನೆ ಇದ್ದು, ಹಂಚು ತೆಗೆದ ಖಾಲಿ ಮನೆ ಇದೆ. ದಕ್ಷಿಣಕ್ಕೆ 2 ನೇ ಪ್ರತಿವಾದಿ ಮನೆ ಇದೆ.

ದಾವಾ ಆಸ್ತಿ ನನ್ನ ಅಜ್ಜನಾದ ತಿಮ್ಮನ ಮಕ್ಕಳ ಸಾಮೂಹಿಕದಲ್ಲಿದೆ. ದಾವಾ ಆಸ್ತಿಯಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಹಾಗೂ 2 ನೇ ಪ್ರತಿವಾದಿ ಹೆಸರಿನಲ್ಲಿ ಮನೆಗಳಿವೆ. ನನ್ನ ತಂದೆ ಹೆಸರಿನಲ್ಲಿರುವ ಮನೆ ನನ್ನ ಅಜ್ಜನ ಕಾಲದಿಂದಲೂ ಇದೆ. 2 ನೇ ಪ್ರತಿವಾದಿ ಮನೆಗಿಂತ ನಮ್ಮ ಮನೆ ದೊಡ್ಡದಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ

ಮನೆ ಮುಂದೆ ಸಿಮೆಂಟ್ ಶೀಟ್ ಗಳನ್ನು ಹಾಕಿ ಸ್ವಲ್ಪ ವಡಾಯಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ.

ದಾವಾ ಆಸ್ತಿಯನ್ನು 2 ನೇ ಪ್ರತಿವಾದಿ ಮನೆ ಕಟ್ಟುವ ಸಮಯದಲ್ಲಿ ಅಳತೆ ಮಾಡಿದೆ. ಸದರಿ ಅಳತೆಯಲ್ಲಿ ಯಾರ ಆಸ್ತಿ ಎಲ್ಲಿಯವರೆಗೆ ಇದೆ ಎಂದು ಗಡಿ ಕಾಣಿಸಿದ್ದಾರೆ ಎಂದರೆ ಸರಿ. ಶೌಚಾಲಯ ಇದೆ ಎಂದು ಹೇಳುವ ಭಾಗ ನಮ್ಮ ವಹಿವಾಟಿ ಗಡಿಯಲ್ಲಿದೆ. ನನ್ನ ಮನೆ ಹಿಂದೆ 2 ನೇ ಪ್ರತಿವಾದಿಗೆ ಸಂಬಂಧಿಸಿದ ಮನೆ ಇದೆ, ಅದಾದ ನಂತರ ಶೌಚಾಲಯ ಇದೆ ಎಂದರೆ ಸರಿ. ಸದರಿ ಶೌಚಾಲಯವನ್ನು ಸರ್ಕಾರದ ಅನುದಾನದಡಿಯಲ್ಲಿ ಕಟ್ಟಿಸಲಾಗಿದೆ. ಸಾಕ್ಷಿ ಸದರಿ ಶೌಚಾಲಯವನ್ನು ನಾನು ಹಾಗೂ 2 ನೇ ಪ್ರತಿವಾದಿ ಕೂಡಿಯೇ ನಿರ್ಮಿಸಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಶೌಚಾಲಯ ನಿರ್ಮಿಸುವಲ್ಲಿ ಪಂಚಾಯತಿ ಪರವಾನಿಗೆ ಪಡೆಯಲಾಗಿದೆ. ಸದರಿ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಅನುದಾನದ ಮೇರೆಗೆ ಅವರೇ ನಿರ್ಮಿಸಿದ್ದಾರೆ, ಅದಕ್ಕೆ ದಾಖಲೆ ನೀಡಿಲ್ಲ ಎಂದು ಹೇಳುತ್ತಾರೆ. ಸದರಿ ಶೌಚಾಲಯವನ್ನು ನಾವೇ ನಿರ್ಮಿಸಿಕೊಂಡಿದ್ದು, ಅದಕ್ಕೆ ಬೇಕಾದ ಹಣದ ಬಿಲ್ ನ್ನು ಪಂಚಾಯತಿಯವರು ನೀಡಿದ್ದಾರೆ. ಸದರಿ ಪಂಚಾಯತಿಯು ನೀಡಿದ ಹಣದ ಬಿಲ್ ಕುರಿತು ಇರುವ ದಾಖಲೆ ನನ್ನ ಬಳಿ ಇಲ್ಲ.

ನಾವು ಶೌಚಾಲಯಕ್ಕೆ 2 ನೇ ಪ್ರತಿವಾದಿ ಮನೆ ಮುಂದಿನ ದಾರಿಯಿಂದ ಹೋಗುತ್ತೇವೆ, ಆದರೆ 2 ನೇ ಪ್ರತಿವಾದಿಯ ಸಹೋದರ ಮಂಕಾಳು ಕಾಳಪ್ಪ ಗೌಡ

ಕೆಲವೊಂದು ಸಾರಿ ಶೌಚಾಲಯಕ್ಕೆ ಬೀಗ ಹಾಕಿದ್ದ ಹಾಗೂ ತನ್ನ ಮನೆಯ ಮೇಲೆ ಹಾಯ್ದುಹೋಗದಂತೆ ಕಲ್ಲು ಹಾಕಿ ತೊಂದರೆ ಉಂಟುಪಡಿಸಿದ್ದ ಹಾಗೂ ಕೊಟ್ಟಿಗೆಯನ್ನು ಕಟ್ಟಿ ದಾರಿ ಬಂದ್ ಮಾಡಿದ್ದಾನೆ ಎಂದು ಹೇಳುತ್ತಾರೆ. ಈ ಕುರಿತು ದಾವೆಯಲ್ಲಿ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಸಹೋದರನನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ.

ದನ ಕಟ್ಟಲು ಕೊಟ್ಟಿಗೆಯನ್ನು ಕಟ್ಟುತ್ತಾರೆ ಎಂದರೆ ಸರಿ, ಸಾಕ್ಷಿ ಕಟ್ಟಿಗೆ ಇಡಲು ಕೊಟ್ಟಿಗೆ ನಿರ್ಮಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ತನ್ನ ಮೊದಲಿನ ಮನೆ ತೆಗೆದು ಹೊಸ ಮನೆ ಕಟ್ಟಿಸುವ ಸಮಯದಲ್ಲಿ ಸದರಿ ಕೊಟ್ಟಿಗೆಯನ್ನು ನಿರ್ಮಿಸಿದ್ದಾನೆ. ಸಾಕ್ಷಿ ಅದನ್ನು ಇದುವರೆಗೂ ತೆಗೆದಿಲ್ಲ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಹಾಗೂ ಆತನ ಕುಟುಂಬ ತಮ್ಮ ಹೊಸ ಮನೆ ಕಟ್ಟಿಸುವ ಸಮಯದಲ್ಲಿ ಸದರಿ ಕೊಟ್ಟಿಗೆಯಲ್ಲಿಯೇ ವಾಸವಿದ್ದರು ಎಂದರೆ ಸರಿ. ಸದರಿ ಶೌಚಾಲಯದ ಪಕ್ಕದಲ್ಲಿ 2 ನೇ ಪ್ರತಿವಾದಿಗೆ ಸಂಬಂಧಿಸಿದ ಶೌಚಾಲಯ ಇದೆ ಎಂದರೆ ಸರಿ. ಎರಡೂ ಶೌಚಾಲಯಗಳಿಗೆ ಸಾಮೂಹಿಕ ಮಧ್ಯದ ಗೋಡೆ ಇದೆ ಎಂದರೆ ಸರಿ. ಸದರಿ ಶೌಚಾಲಯಗಳ ತ್ಯಾಜ್ಯ ವಸ್ತು ಶೇಖರಣೆ ಒಂದೇ ಟ್ಯಾಂಕನಲ್ಲಿ ಆಗುತ್ತದೆ ಎಂದರೆ ಸರಿ.

ಈ ದಾವೆ ಸಲ್ಲಿಸುವಾಗ ಎರಡನೇ ಪ್ರತಿವಾದಿ ಕಟ್ಟಿಸುತ್ತಿದ್ದ ಮನೆ ಲಿಂಟಲ್ ವರೆಗೂ ಬಂದಿತ್ತು, ಸಾಕ್ಷಿ ಸದರಿ ಮನೆ ಪಾಯ ಹಾಕಿದಾಗಲೇ ನಾವು ಹೇಳುತ್ತಾ ಬಂದಿದ್ದೇವು ಆದರೆ, ಅವರು ನಮ್ಮ ಮಾತಿಗೆ ಕಿವಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಪಾಯ ಹಾಕಿದಾಗ

ಹೇಳಿದ ಬಗ್ಗೆ ಲಿಖಿತವಾಗಿ ಯಾವುದೇ ದಾಖಲೆ ನೀಡಿಲ್ಲ. ಮನೆ ಕಟ್ಟಲು 2022-23 ರಲ್ಲಿ ಪಾಯ ಹಾಕಿದ್ದಾರೆ. ಪಾಯ ಹಾಕಿದ ಮೇಲೆ 2 ತಿಂಗಳಲ್ಲಿ ಲಿಂಟಲ್ ವರೆಗೆ ಕಟ್ಟಿಸಿದ್ದಾರೆ. ಸದರಿ ಹೊಸ ಮನೆ ಕಟ್ಟಿಸಲು ಪ್ರಾರಂಭಿಸುವ ಪೂರ್ವದಲ್ಲಿಯೇ 2 ನೇ ಪ್ರತಿವಾದಿ ತಾತ್ಕಾಲಿಕ ಕೊಟ್ಟಿಗೆ ನಿರ್ಮಿಸಿಕೊಂಡಿದ್ದಾನೆ ಎಂದರೆ ಸರಿ. 2 ನೇ ಪ್ರತಿವಾದಿ ಕೊಟ್ಟಿಗೆ ನಿರ್ಮಿಸಿಕೊಂಡ ನಂತರ ನಾವು ಶೌಚಾಲಯಕ್ಕೆ ನಮ್ಮ ಮನೆಯ ಪೂರ್ವಕ್ಕಿರುವ ಪೊಕ್ಕಾ ಗಿರಿಯಾ ಗೌಡರವರ ಮನೆಯ ಕಡೆಯಿಂದ ಹೋಗಿ ಬಂದು ಮಾಡಿರುತ್ತೇವೆ. ಈ ಕುರಿತು ದಾವೆಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ.

ನಮ್ಮ ಮನೆ ಉತ್ತರಕ್ಕೆ ಮುಖ ಮಾಡಿದೆ. ನಮ್ಮ ಮನೆಯ ಹಿಂದುಗಡೆ 2 ನೇ ಪ್ರತಿವಾದಿ ಮನೆಯೂ ಸಹ ಉತ್ತರಕ್ಕೆ ಮುಖ ಮಾಡಿದೆ. ನಮ್ಮ ಮನೆಯ ಹಾಗೂ 2 ನೇ ಪ್ರತಿವಾದಿ ಮನೆಯ ಪೂರ್ವ ದಿಕ್ಕಿನ ಕಡೆಯಿಂದ ಶೌಚಾಲಯಕ್ಕೆ ಹೋಗುತ್ತಿದ್ದೆ. 2 ನೇ ಪ್ರತಿವಾದಿ ಮನೆಯ ಪೂರ್ವ ದಿಕ್ಕಿಗೆ ಪೊಕ್ಕಾ ಗಿರಿಯಾ ಗೌಡನ ಮನೆಯಿದೆ. 2 ನೇ ಪ್ರತಿವಾದಿ ಹಾಗೂ ಪೊಕ್ಕಾ ಗಿರಿಯಾ ಗೌಡನ ಮನೆಯ ನಡುವೆ 5-6 ಅಡಿ ಅಗಲದ ಜಾಗೆಯಿದೆ. 2 ನೇ ಪ್ರತಿವಾದಿಯ ಮನೆ ಪೂರ್ವ-ಪಶ್ಚಿಮ 20-25 ಅಡಿ ಇರಬಹುದು. ಪೊಕ್ಕಾ ಗಿರಿಯಾ ಗೌಡನ ಮನೆ ಬಹಳ ವರ್ಷಗಳಿಂದ ಇದೆ. ಸದರಿ ಮನೆ ದೊಡ್ಡದಿದೆ ಎಂದರೆ ಸರಿ. 2 ನೇ ಪ್ರತಿವಾದಿ ಮನೆ ದಾಟಿದ ನಂತರ ಶೌಚಾಲಯ ಇದೆ ಎಂದರೆ ಸರಿ. 2 ನೇ ಪ್ರತಿವಾದಿ ಮನೆಯ ದಕ್ಷಿಣಕ್ಕೆ 3-ಅಡಿಯ ಅಂತರದಲ್ಲಿ ಶೌಚಾಲಯ ಇದೆ.

2 ನೇ ಪ್ರತಿವಾದಿ ಕಟ್ಟಿಸುತ್ತಿದ್ದ ಮನೆಯ ಪಾಯ, ಕಟ್ಟಡ ಮಾಡುವವರೆಗೆ ಸದರಿ ಶೌಚಾಲಯ ಉಪಯೋಗಿಸುತ್ತಿದ್ದೇವು ಎಂದರೆ ಸರಿ. ಸದರಿ ಶೌಚಾಲಯದ ಬಾಗಿಲು ತೆಗೆಯಲು ಹಾಗೂ ಮುಚ್ಚಲು ಯಾವುದೇ ತೊಂದರೆ ಉಂಟಾಗಿಲ್ಲ ಎಂದರೆ ಸರಿ. ಶೌಚಾಲಯ ಉಪಯೋಗಿಸಲು ಪ್ರತಿವಾದಿಯರು ತೊಂದರೆ ನೀಡಿಲ್ಲ ಎಂದರೆ ಸರಿ. ನಮ್ಮ ಹಾಗೂ 2 ನೇ ಪ್ರತಿವಾದಿ ಮನೆ ನಡುವೆ 8-ಅಡಿ ಅಗಲದ ಕೊಟ್ಟಿಗೆ ಇದೆ, ಅದರ ಮುಖ ಪಶ್ಚಿಮಕ್ಕಿದೆ. ಸದರಿ ಕೊಟ್ಟಿಗೆ ಮುಂಭಾಗದಲ್ಲಿ ಓಡಾಡಲು ಅವಕಾಶ ಇದೆ ಎಂದರೆ ಅವರ ಮನೆಗೆ ಹೋಗಿ ಬರಲು ದಾರಿ ಇದೆ ಹೊರತು ನಮ್ಮ ಮನೆಯಿಂದ ಶೌಚಾಲಯಕ್ಕೆ ಹೋಗಲು ದಾರಿ ಇಲ್ಲವೆಂದು ಹೇಳುತ್ತಾರೆ. ಸದರಿ ಕೊಟ್ಟಿಗೆ ತಾತ್ಕಾಲಿಕವಾಗಿ ಕಟ್ಟಿದ್ದಾರೆ ಎಂದರೆ ಸರಿ.

ಮೂಲದಾವೆ ನಂ. 97/1995 ರ ಕುರಿತು ಅಂತಿಮ ಡಿಕ್ರಿ ಸಲುವಾಗಿ ಅರ್ಜಿ ಸಲ್ಲಿಸಿದ ಬಗ್ಗೆ ಮಾಹಿತಿ ಇಲ್ಲ. ನಮ್ಮ ತಂದೆ ಹಾಕಿದ ದಾವೆಯಲ್ಲಿ ಏನು ಬರೆದಿದ್ದಾರೆಂದು ತಿಳಿದುಕೊಂಡು ಬಂದಿಲ್ಲ. ಸರ್ವೇ ನಂ. 325/1-29 ಇದು 2 ನೇ ಪ್ರತಿವಾದಿಗೆ ಸಂಬಂಧಪಟ್ಟಿರುತ್ತದೆ. ಸದರಿ ಆಸ್ತಿಯು ನನ್ನ ಮನೆ ಇರುವ ಜಮೀನಿನ ಪಶ್ಚಿಮಕ್ಕಿದೆ. ಸರ್ವೇ ನಂ. 325/1-29 ನ್ನು 2 ನೇ ಪ್ರತಿವಾದಿ ಹಾಗೂ ಆತನ ಕುಟುಂಬದವರು ಬಹಳ ವರ್ಷಗಳಿಂದ ವಹಿವಾಟಿ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯ ಮೇಲೆ ನಮ್ಮ ಹಕ್ಕಿಲ್ಲ ಎಂದರೆ ಸರಿಯಲ್ಲ, ಅದು ಪಿತ್ರಾರ್ಜಿತ ಎಂದು ಹೇಳುತ್ತಾರೆ. ಸದರಿ ಆಸ್ತಿ ಪಿತ್ರಾರ್ಜಿತ ಅಲ್ಲ, ಅದು ಪ್ರತಿವಾದಿ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ

ಸರಿಯಲ್ಲ. ಸದರಿ ಆಸ್ತಿ ಪ್ರತಿವಾದಿ ಕುಟುಂಬಕ್ಕೆ ಸೇರಿರುವುದರಿಂದ ಅದನ್ನು ಮೂಲದಾವೆ ನಂ. 97/1995 ರಲ್ಲಿ ಸೇರಿಸಿಲ್ಲ ಎಂದರೆ ಸರಿ.

ನಮ್ಮ ವಾಸ್ತವ್ಯದ ಮನೆ ಇರುವ ಜಮೀನಿನಲ್ಲಿ ಬೇರೆ ಬೇರೆ ಪಾಲುದಾರರಿಗೆ ಹಕ್ಕಿದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1/3 ಹಕ್ಕಿದೆ. ಸದರಿ ಜಮೀನಿನಲ್ಲಿ 2 ನೇ ಪ್ರತಿವಾದಿ ಕುಟುಂಬಕ್ಕೂ ಸಹ 1/3 ಹಕ್ಕಿದೆ ಎಂದರೆ ಸರಿ. 2 ನೇ ಪ್ರತಿವಾದಿ ಮನೆ ಕಟ್ಟಬಾರದೆಂದು ಪಂಚಾಯತಿಗೆ ತಕರಾರು ನೀಡಿದ್ದೇನೆ. ಪಂಚಾಯತಿಯವರು ಮನೆ ಹತ್ತಿರ ಬಂದು ಸರ್ವೇ ಮಾಡಿದ್ದಾರೆ. ಮನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನದ ಬಿಲ್ಲು ಸಹ ಬಿಡುಗಡೆಯಾಗಿದೆ ಎಂದರೆ ಸರಿ. ಸದರಿ ಬಿಲ್ಲು ಪಾಸಾಗುವ ಮೊದಲು ಸರ್ಕಾರದಿಂದ ಸ್ಥಳಕ್ಕೆ ಸಂಬಂಧಿಸಿದಂತೆ ಜಿಪಿಎಸ್ ಮಾಡುತ್ತಾರೆ ಎಂದರೆ ಸರಿ. ಜಿಪಿಎಸ್ ಮಾಡುವಾಗ ತಕರಾರು ಮಾಡಿಲ್ಲ. ಒಟ್ಟು ಎಷ್ಟು ಬಿಲ್ಲು ಆಗಿದೆ ಎಂದು ಮಾಹಿತಿ ಇಲ್ಲ.

ಸರ್ಕಾರದಿಂದ ಅನುದಾನ ಪಡೆದು ಮನೆ ಕಟ್ಟಬೇಕು ಎಂದರೆ ಪಂಚಾಯಿತಿ ಪರವಾನಿಗೆ ಮಾಡಿಸಬೇಕು ಎಂದರೆ ಸರಿ. ಮನೆ ಕಟ್ಟಲು ಪಂಚಾಯಿತಿಯಿಂದ ಪರವಾನಿಗೆ ಪಡೆದಿದ್ದಾನೆಯೇ ಎಂದು ನಾನು ವಿಚಾರಿಸಿಲ್ಲ. ದಾವೆ ದಾಖಲಿಸಲು ವಕೀಲರಿಗೆ ನನ್ನ ತಂದೆ ಮಾಹಿತಿ ನೀಡಿದ್ದಾನೆ. ನನ್ನ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ನೀಡಿದ್ದೇನೆ. ನ್ಯಾಯಾಲಯಕ್ಕೆ ಮಾಹಿತಿ ಬರೆದು ಹಾಕುವ ಸಮಯದಲ್ಲಿ ಕಾಗದ ಪತ್ರ ನೋಡಿಯೇ ಬರೆದುಕೊಡಬೇಕು ಎಂದರೆ ಸರಿ. ನನ್ನ ಪ್ರಮಾಣ ಪತ್ರ ಸಲ್ಲಿಸುವಾಗ

ಪಂಚಾಯತಿ ಪರವಾನಿಗೆ ಆದ ಬಗ್ಗೆ ವಿಚಾರಿಸಿಲ್ಲ. ನನ್ನ ತಂದೆಯೂ ಸಹ ಪರವಾನಿಗೆ ಕುರಿತು ವಿಚಾರಿಸಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.